*ಕರ್ನಾಟಕ ಸರ್ಕಾರ* *(ಸಿ.ಆರ್.ಪಿ.67)*

| |
|---|
| *ಹೇಳಿಕೆ ಹಾಳೆ*<br>*ಆರ್.ಪಿ.ಸಂಖ್ಯೆ.57*<br>*ನಮೂನೆ ಸಂಖ್ಯೆ.4*<br>*(ಸಿವಿಲ್ )* |

*3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,*
*ಚಿಕ್ಕಬಳ್ಳಾಪುರ.*

*ಎಸ್.ಸಿ. ಸಂಖ್ಯೆ:* ***77/2020***

| | |
|---|---|
| *PW* | *1* |
| *CW* | *1* |

*ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ* ***23.12.2021***

| | | |
|---|---|---|
| ಸಾಕ್ಷಿಯ ಹೆಸರು | : | ಅರುಣ್ ಕುಮಾರ್ . ಎಂ |
| ತಂದೆಯ/ಗಂಡನ ಹೆಸರು | : | ಸಿ. ಮುನಿಯಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಎಫ್ .ಡಿ. ಎ , ಸಿಜೆ. ಎಂ ನ್ಯಾಯಾಲಯ |
| ವಾಸಸ್ಥಳ | : | ಚಿಕ್ಕಬಳ್ಳಾಪುರ |

*ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ*

*ನಾನು 2009 ರಿಂದಇಲ್ಲಿಯವರೆಗೆ ಚಿಕ್ಕಬಳ್ಳಾಪುರದ ಹಿರಿಯ ಶ್ರೇಣಿ ಮತ್ತು ಸಿ. ಜೆ. ಎಂ ನ್ಯಾಯಾಲಯದಲ್ಲಿ ಎಫ್ .ಡಿ. ಎ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.*

***1.*** *ಮೃತ ನವೀನ್ ನಮ್ಮ ಕಚೇರಿಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದರು. ಚಾಸಾ -2 ನಮ್ಮ ಕಚೇರಿಯಲ್ಲಿ ಶಿರಸ್ತೇದಾರ್ ಆಗಿ ಕೆಲಸ ಮಾಡುತ್ತಿದ್ದರು. ಚಾಸಾ -3 ನಮ್ಮ ಕಚೇರಿಯಲ್ಲಿ ಶಿರಸ್ತೇದಾರ್ ಆಗಿ ಕೆಲಸ ಮಾಡುತ್ತಿದ್ದರು. ಚಾಸಾ -4 ನ್ಯಾಯಾಲಯದ ಪಿ. ಸಿ ಆಗಿದ್ದರು. ಚಾಸಾ -5 ನಮ್ಮ ಕಚೇರಿಯಲ್ಲಿ ಅಟೆಂಡರ್ ಆಗಿದ್ದರು. ಚಾಸಾ 6 ರಿಂದ 11 ಗೊತ್ತಿಲ್ಲ . ಚಾಸಾ -12 ಸ್ಟೆನೋಗ್ರಾಫ ರ್ ಆಗಿದ್ದರು. ಚಾಸಾ -13 ರಿಂದ 25 ಗೊತ್ತಿಲ್ಲ.*

PW:1CW:1

2. ಆರೋಪಿಗಳನ್ನು ನೋಡಿದ್ದೇನೆ.  4 ನೇ ಆರೋಪಿ ನಮ್ಮ ಜೊತೆ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದರು. ಉಳಿದ ಆರೋಪಿಗಳು ಏನು ಕೆಲಸ ಮಾಡುತ್ತಾರೆ ಗೊತ್ತಿಲ್ಲ.

3. ದಿಃ 18.08.2020 ರಂದು ನಾನು ಕರ್ತವ್ಯದಲ್ಲಿದ್ದಾಗ ಸುಮಾರು 11.45 ಕ್ಕೆ ಶಿರಸ್ತೇದಾರರಾದ ಅಶ್ವತ್ಥಪ್ಪ ರವರು ನನ್ನ ಬಳಿ ಬಂದು ಅಟೆಂಡರ್ ನವೀನ್ ಫೋನ್ ತೆಗೆಯುತ್ತಿಲ್ಲ, ಆತನ ರೂಮ್ ನೋಡಿದ್ದರೆ ಹೋಗಿ ನೋಡಿಕೊಂಡು ಬನ್ನಿ ಎಂದು ಹೇಳಿದರು. ನಂತರ ನ್ಯಾಯಾಧೀಶರ ಅನುಮತಿ ಪಡೆದು ನವೀನ್ ರವರ ರೂಮ್ ನಿನ ಹತ್ತಿರ ಹೋದೆ. ಹೊರಗಡೆಯಿಂದ ಆತನ ಹೆಸರು ಹಿಡಿದು ಮೂರು , ನಾಲ್ಕು ಬಾರಿ ಕರೆದೆ. ಆತ ಯಾವುದೇ ಉತ್ತರ ಕೊಡದೇ ಇದ್ದ ಕಾರಣ ಗ್ರೀಲ್ ಡೋರ್ ತೆಗೆದು ನಾನು ಒಳಗೆ ಹೋದೆ. ಮರದ ಬಾಗಿಲು ಸ್ವಲ್ಪ ತಳ್ಳಿದ ತಕ್ಷಣ ನವೀನ್ ಅಲ್ಲೇ ಅಂಗಾತ ಮಲಗಿದ್ದ. ಆತನ ಬಾಯಿಯಲ್ಲಿ ಚೂರು ರಕ್ತ ಬಂದಿತ್ತು. ನಾನು ಗಾಬರಿ ಗೊಂಡು ನ್ಯಾಯಾಧೀಶರಿಗೆ ಫೋನ್ ಮಾಡಿ ವಿಚಾರ ತಿಳಿಸಿದೆ. ನ್ಯಾಯಾಧೀಶರು ಚಾಸಾ -2 ರಿಂದ 4 ರವರನ್ನು ಸದರಿ ರುಾಮ್ ನ ಬಳಿ ಕಳುಹಿಸಿದರು. ಚಾಸಾ -4 ರವರು ಅತನಿಗೆ ಏನೋ ಆಗಿದೆ ಪೋಲೀಸರನ್ನು ಕರೆಸಿಸೋಣ ಎಂದು ಹೇಳಿದರು. ಅಷ್ಟರಲ್ಲಿ ನ್ಯಾಯಾಧೀಶರು ನಗರ ಠಾಣೆಯ ಪಿ. ಎಸ್ . ಐ ಗೆ ಫೋನ್ ಮಾಡಿ ವಿಷಯ ತಿಳಿಸಿದ್ದರು. ಸದರಿ ಪೊಲೀಸರು ಅಲ್ಲಿಗೆ ಬಂದರು. ಪೊಲೀಸರು ಬಂದು ಪರಿಶೀಲನೆ ಮಾಡಿ ಆತ ತೀರಿಕೊಂಡಿದ್ದಾನೆ ಎಂದು ತಿಳಿಸಿದರು. ಅದೇ ದಿನ ಅದೇ ಸ್ಥಳದಲ್ಲಿ ದೂರನ್ನು ಬರೆದುಕೊಟ್ಟಿರುತ್ತೇನೆ. ಸದರಿ ದೂರನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ -1 ಎಂದು , ಸಾಕ್ಷಿಯ ಸಹಿಯನ್ನು ನಿಪಿ -1(ಎ) ಎಂದು ಗುರುತಿಸಲಾಯಿತು.

4. ಅದೇ ದಿನ ಸಂಜೆ 5.00 ಗಂಟೆಯಿಂದ ಪೊಲೀಸರು ಸದರಿ ಮನೆಯಲ್ಲಿ ಮಹಜರು ಮಾಡಿದರು. ಆ ಸಮಯದಲ್ಲಿ ನನ್ನ ಜೊತೆ ಚಾಸಾ -2 ರಿಂದ 4 ಹಾಜರಿದ್ದರು. ಸಾಕ್ಷಿ ಸದರಿ ಮಹಜರನ್ನು ಗುರುತಿಸಿದ್ದು ಅದನ್ನು ನಿಪಿ -2 ಎಂದು, ಸಾಕ್ಷಿಯ ಸಹಿಯನ್ನು ನಿಪಿ

PW:1CW:1

-2(ಎ) ಎಂದುಗುರುತಿಸಲಾಯಿತು. ಮಹಜರು ಸಮಯದಲ್ಲಿ ತಲೆ ದಿಂಬು , ಕತ್ತಿಗೆ ಸುತ್ತಿದ್ದ ಶರ್ಟ್ , ಜೀನ್ಸ್ ಪ್ಯಾಂಟ್ ಮತ್ತು ನೈಟು ಪ್ಯಾಂಟ್ ವಶಪಡಿಸಿಕೊಂಡರು. ಆ ಸಮಯದಲ್ಲಿ ಪೊಲೀಸರು ಆತನ ಬಾಯಿಯಿಂದ , ಮೂಗಿನಿಂದ ರಕ್ತ ತೆಗೆದುಕೊಂಡರು. ಅಲ್ಲಿ ಇದ್ದ ಎರಡು ಪೋನ್ ಗಳನ್ನು ವಶಕ್ಕೆ ಪಡೆದರು. ಅವುಗಳಲ್ಲಿ ಒಂದು ಕೀ ಪ್ಯಾಡ್ ಮೊಬೈಲ್ , ಇನ್ನೊಂದು ಟಚ್ ಸ್ಕೀನ್ ಮೊಬೈಲ್. ?ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಅದಕ್ಕೆ ನನ್ನ ಜೊತೆ ಚಾಸಾ -2 ರಿಂದ 4 ಸಹಿ ಮಾಡಿರುತ್ತಾರೆ. ನಾನು ನೋಡಿದಾಗ ನವೀನ್ ಅಂಗಾಂತ ಬಿದ್ದಿದ್ದ ಅತನ ಕತ್ತಿಗೆ ಶರ್ಟ್ ಸುತ್ತಿದ್ದರು. ಈಗ ತೋರಿಸಿದ ಪೊಟೋಗಳು ಸದರಿ ನವೀನ್‌ನ ಪೊಟೋಗಳಾಗಿರುತ್ತವೆ. ಅವುಗಳನ್ನು ನಿಪಿ -3 ಮತ್ತು 4 ಎಂದು ಗುರುತಿಸಲಾಯಿತು. ಪೊಲೀಸರು ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಅವುಗಳನ್ನು ಗುರುತಿಸಿದ್ದು ತಲೆದಿಂಬುಗಳ ನ್ನು ಎಂ. ಒ – 1 ಮತ್ತು 2 ಎಂದು, ಜೀನ್ಸ್ ಪ್ಯಾಂಟ್ ನ್ನು ಎಂ. ಒ -3 , ನೈಟ್ ಪ್ಯಾಂಟ್ ನ್ನು ಎಂ.ಒ -4 , ಶರ್ಟ್ ನ್ನು ಎಂ. ಒ -5, ಟಚ್ ಸ್ಕೀನ್ ಪೋನ್ ಎಂ. ಒ -6 ಎಂದು , ಬಟನ್ ಪೋನ್ ನ್ನು ಎಂ. ಒ -7 ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಪೊಲೀಸರು ಪೊಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿ ಅವುಗಳನ್ನು ಗುರುತಿಸಿದ್ದು ಅವುಗಳನ್ನು ಆರೋಪಿ ಪರ ವಕೀಲರ ತಕರಾರಿನ ಮೇರೆಗೆ ನಿಪಿ -5 ಮತ್ತು 6 ಎಂದು ಗುರುತಿಸಲಾಯಿತು.

5. ದಿಃ 25.06.2020 ರಂದು ಪೊಲೀಸರು ನ್ಯಾಯಾಧೀಶರ ಅನುಮತಿ ಪಡೆದು ಇನ್ನೊಂದು ಮಹಜರು ಮಾಡಿದರು. ಸದರಿ ಮಹಜರನ್ನು ನಿಪಿ - 7 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ -7(ಎ) ಎಂದುಗುರುತಿಸಲಾಯಿತು. ಆ ಸಮಯದಲ್ಲಿ ಒಂದು ಬೆಲ್ಟ್ ನ್ನು ವಶಪಡಿಸಿಕೊಂಡರು. ಸದರಿ ಬೆಲ್ಟ್ ನ್ನು ಗುರುತಿಸಿದ್ದು

*PW:1CW:1*

*ಅದನ್ನು ಎಂ. ಒ -8 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಚಾಸಾ -3 ಅದಕ್ಕೆ ಸಹಿ ಮಾಡಿದರು. ಅದೇ ದಿನ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ. ಮೃತ ನವೀನ್ ಗೂ ಮತ್ತು 4 ನೇ ಆರೋಪಿ ದೀಪಾ ಗೂ ಅಕ್ರಮ ಸಂಬಂಧ ಇದ್ದ ಕಾರಣ ಕೊಲೆ ಆಗಿದೆ ಎಂದು ಗೊತ್ತಾಯಿತು. ಸದರಿ ಕೊಲೆಯನ್ನು 1 ನೇ ಆರೋಪಿ ಮಾಡಿಸಿದ್ದಾರೆ ಎಂದು ಗೊತ್ತಾಯಿತು. 1 ನೇ ಆರೋಪಿ ಆತನ ಇಬ್ಬರ ಕಕ್ಷಿದಾರರಿಗೆ ಹೇಳಿ ಕೊಲೆ ಮಾಡಿಸಿದ್ದಾರೆ ಎಂದು ಗೊತ್ತಾಯಿತು.*

*ಪಾಟೀಸವಾಲು : ಶ್ರೀ.ಹೆಚ್. ಆರ್ . ವಿ ವಕೀಲರಿಂದ, **2** ಮತ್ತು **3** ನೇ ಆರೋಪಿತರ ಪರವಾಗಿಃ*

6 . ಘಟನೆಯ ವಿಚಾರವನ್ನು ನ್ಯಾಯಾಧೀಶರಿಗೆ ಫೋನ್ ಮೂಲಕ ತಿಳಿಸಿದ ನಂತರ ನಾನು ನ್ಯಾಯಾಲಯಕ್ಕೆ ಬರಲಿಲ್ಲ. ಸಂಜೆ ವರೆಗೂ ಅಲ್ಲೇ ಇದ್ದೆ. ಪೊಲೀಸರು 15 ರಿಂದ 20 ನಿಮಿಷದಲ್ಲಿ ಅಲ್ಲಿಗೆ ಬಂದರು. ನ್ಯಾಯಾಧೀಶರು ಹೇಳಿದಂತೆ ನಾನು ನವೀನನ ರೂಮಿಗೆ ಹೋದ ಬಗ್ಗೆ ಮೂಮೆಂಟ್ ರಿಜಿಸ್ಟರ್ ನಲ್ಲಿ ಬರೆದಿರುತ್ತೇನೆ. ಬೆಳಿಗ್ಗೆ 11.45 ರಿಂದ ಸಂಜೆಯವರೆಗೆ ನಾನು ಅಲ್ಲೇ ಇದ್ದೆ . ಮಹಜರು ನಲ್ಲಿ ಬರೆದಿರುವುದನ್ನು ನಾನು ಓದಿರುತ್ತೇನೆ. ಬೆಲ್ಟ್ ನ್ನು ದಿಃ 18.08.2020 ರ ಮಹಜರು ಸಮಯದಲ್ಲಿ ವಶಪಡಿಸಿಕೊಂಡರು. ಅಲ್ಲಿ ಇದ್ದ ಮೊಬೈಲ್ ಗಳನ್ನು ನಾನು ಪೊಲೀಸರು ಪರಿಶೀಲನೆ ಮಾಡಲಿಲ್ಲ. ಮೃತ ನವೀನ್ ಇದ್ದ ರೂವಿನ ಚಕ್ ಬಂದಿ ಪೂರ್ವಕ್ಕೆ - ರಸ್ತೆ ನಂತರ ಪ್ರಕೃತಿ ಶಾಲೆ , ಪಶ್ಚಿಮಕ್ಕೆ - ಒಂದು ಹೊಸದಾಗಿ ಕಟ್ಟುತಿದ್ದ ಕಟ್ಟಡ , ಉತ್ತರಕ್ಕೆ - ರಸ್ತೆ , ಮತ್ತು ದಕ್ಷಿಣಕ್ಕೆ - ಖಾಲಿ ನಿವೇಶನ ಇರುತ್ತದೆ. ಮೃತ ನವೀನ ಮೊದಲನೇ ಹಂತಸ್ತಿನಲ್ಲಿ ಇದ್ದ, ಕೆಳ ಹಂತಸ್ತಿನಲ್ಲಿ ಮನೆಯ ಮಾಲೀಕರು ಇದ್ದರು. ಸಮಾನ್ಯವಾಗಿ ಸಣ್ಣದಾಗಿ ಕಿರುಚಾಡಿದರೆ ಅಕ್ಕಪಕ್ಕದ ಮನೆಯವರಿಗೆ ಕೇಳಿಸುತ್ತದೆ ಎಂದರೆ ಸರಿ. ಮಹಜರುನಲ್ಲಿ ನವೀನನಿಗೆ ಮೂಗಿನಲ್ಲಿ , ಬಾಯಿಯಲ್ಲಿ ರಕ್ತ ಬರುತ್ತಿದ್ದ ಬಗ್ಗೆ ಬರೆದಿರುತ್ತಾರೆ. ಕತ್ತಿಗೆ ಶರ್ಟ ಬಿಗಿದಿದ್ದ ಮಾರ್ಕ್ ಇತ್ತು ಅದನ್ನು ನಾನು ನೋಡಿದ್ದೆ . ಅದನ್ನು ಸಹ ಮಹಜರುನಲ್ಲಿ ಬರೆದಿರುತ್ತಾರೆ.

*PW:1CW:1*

4 ನೇ ಆರೋಪಿ ಮತ್ತು ಮೃತ ನವೀನ್ ಗೂ ಅಕ್ರಮ ಸಂಬಂದ ಇತ್ತು ಆ ವಿಚಾರವಾಗಿ 1 ನೇ ಆರೋಪಿ 2 ಮತ್ತು 3 ಆರೋಪಿಗಳಿಗೆ ಸುಫಾರಿ ಕೊಟ್ಟು ನವೀನ್ ನನ್ನು ಕೊಲೆ ಮಾಡಿಸಿದ ವಿಚಾರ ಆರೋಪಿಗಳನ್ನು ದಸ್ತಗಿರಿ ಮಾಡಿದ ನಂತರ ಗೊತ್ತಾಯಿತು ಅಲ್ಲಿಯವರೆಗೆ ಗೊತ್ತಾಗಲಿಲ್ಲ. ಈ ವಿಚಾರವನ್ನು ಪೊಲೀಸರು ಮತ್ತು ಜನರು ಮಾತನಾಡುತ್ತಿದ್ದಾಗ ಗೊತ್ತಾಯಿತು. ಜನರು ಮಾತನಾಡುತ್ತಿದ್ದಾಗ ಈ ವಿಚಾರ ಗೊತ್ತಾಯಿತು ಎಂದು ನನ್ನ ಹೇಳಿಕೆಯಲ್ಲಿ ನಾನು ಹೇಳಿಲ್ಲ. ನಾನು ಮತ್ತು ಮೃತ ನವೀನ ಬಹಳ ವಿಶ್ವಾಸದಿಂದ ಇದ್ದೆವು ಎಂದರೆ ಸರಿ. ಮೃತ ನವೀನ್ ಗೆ ನಾನು ಪ್ರತಿದಿನ ಪೋನ್ ಮಾಡುತ್ತಿರಲಿಲ್ಲ.

ಪಾಟೀ ಸವಾಲುಃ ಶ್ರೀ .ಕೆ. ಎನ್ . ಎಂ. ವಕೀಲರಿಂದ **1** ನೇ ಆರೋಪಿ ಪರವಾಗಿ

7. ನಾನು ಕೃತ್ಯ ನಡೆದ ಸ್ಥಳದಲ್ಲಿ ಇದ್ದಾಗಲೇ ಪೊಲೀಸರು ಅಲ್ಲಿಗೆ ಬಂದಿದ್ದರು. ಸಂಜೆ ನಾನು 6.00 ಗಂಟೆಯವರೆಗೆ ಅಲ್ಲಿ ಇದೆ. ದೂರನ್ನು ನಾನು ಸ್ಥಳದಲ್ಲಿ ಬರೆದೆ. ಅದನ್ನು ಬರೆಯುವಾಗ ಮದ್ಯಾಹ್ನ 1.30 ರಿಂದ 2.00 ಗಂಟೆಯಾಗಿತ್ತು. ದೂರನ್ನು ಅಲ್ಲಿ ಇದ್ದ ಪೊಲೀಸರ ಜೊತೆ ಸಮಾಲೋಚನೆ ಮಾಡಿ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಇದ್ದ ಗ್ರೀಲ್ ಡೋರ್ ಮತ್ತು ಮರದ ಡೋರ್ ಒಳಗಿನಿಂದ ಚಿಲಕ ಹಾಕಿಕೊಳ್ಳುವ ವ್ಯವಸ್ಥೆ ಇದ್ದ ಬಾಗಿಲುಗಳು ಎಂದರೆ ಸರಿ. ಸದರಿ ಬಾಗಿಲುಗಳ ಕೀಗಳು ಜಖಂಗೊಂಡಿರಲಿಲ್ಲ. ಒಳಗಿನಿಂದ ಸದರಿ ಬಾಗಿಲುಗಳಿಗೆ ಒಳಗಿನವರು ಬೀಗ ಹಾಕಿದ್ದರೆ ತೆಗೆಯಲು ಬರುವುದಿಲ್ಲ. ಆದರೆ ಚಿಲಕ ಹಾಕಿದ್ದರೆ ಹೊರಗಿನಿಂದ ತೆಗೆಯ ಬಹುದು. ನಾನು ಬಾಗಿಲನ್ನು ತೆಗೆದು ಒಳಗೆ ಹೋದಾಗ ಅದು ಒಳಗಿನಿಂದ ಸ್ವಲ್ಪ ಚಿಲಕ ಹಾಕಿತ್ತು. ಆ ರೀತಿ ಒಳಗಿನಿಂದ ಚಿಲಕ ಹಾಕಬೇಕಾದರೆ ಒಬ್ಬ ವ್ಯಕ್ತಿ ಒಳಗೆ ಇರಬೇಕು ಎಂದರೆ ಹೊರಗಿನಿಂದಲೂ ಆ ರೀತಿ ಚಿಲಕ ಹಾಕಬಹುದು ಎನ್ನುತ್ತಾರೆ. ಮರದ ಬಾಗಿಲಿಗೆ ಹೊರಗಿನಿಂದ ಚಿಲಕ ಹಾಕಲು ಸಾಧ್ಯವಿಲ್ಲ ಎಂದರೆ ಸರಿ . ಮರದ ಬಾಗಿಲನ್ನು ತೆಗೆದು ಒಳಗೆ ಇರುವ ವ್ಯಕ್ತಿ ಹೊರಗೆ ನೋಡಿದರೆ ಗ್ರೀಲ್ ಬಾಗಿಲಿನ ಹತ್ತಿರ ಯಾರು ಇದ್ದಾರೆ ಎಂದು ಕಾಣಿಸುತ್ತಾರೆ ಎಂದರೆ ಸರಿ. ಮೊದಲಿಗೆ ನಾನು ಒಬ್ಬನೇ ಹೋಗಿದ್ದೆ . ನಾನು ಮೃತ ದೇಹ ನೋಡಿದ ನಂತರ ವರಾಂಡ

*PW:1CW:1*

ಕ್ಕೆ ಬಂದು ನ್ಯಾಯಾಧೀಶರಿಗೆ ಫೋನ್ ಮಾಡಿದೆ . ಆಗ ಅವರು ಅಲ್ಲೇ ಇರುವಂತೆ ನನಗೆ ಹೇಳಿದರು. ಮಹಜರುನಲ್ಲಿ ಮರದ ಬಾಗಿಲು ಜಖಂಗೊಂಡ ಬಗ್ಗೆ ಬರೆದಿದ್ದಾರೋ ಇಲ್ಲಮೋ ನನಗೆ ಗೊತ್ತಿಲ್ಲ. ಪೊಲೀಸರ ಜೊತೆ ಪೂರ್ವಭಾವಿ ಚರ್ಚೆ ಮಾಡಿ ನಂತರ ಅವರು ಹೇಳಿದಂತೆ ದೂರನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಪೊಲೀಸರು ಸ್ಥಳ ಮಹಜರು ತನಿಖೆ ಮಾಡಿದ ನಂತರ ಸಂಜೆ 6.00 ಗಂಟೆಗೆ ಸ್ಥಳದಲ್ಲಿ ಪೊಲೀಸರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮಹಜರನ್ನು ಬರೆದ ಪೊಲೀಸರ ಹೆಸರು ಗೊತ್ತಿಲ್ಲ. ಅಲ್ಲಿ ಎಷ್ಟು ಜನ ಪೊಲೀಸರು ಇದ್ದರು ನಾನು ಗಮನಿಸಲಿಲ್ಲ. ಅಲ್ಲಿ 5 - 6 ಜನ ಪೊಲೀಸರು ಇದ್ದಿರಬಹುದು. ಅದರಲ್ಲಿ ವಿಶೇಷ ತರಬೇತಿ ಪಡೆದ ಪೊಲೀಸರು ಇದ್ದರೋ ಇಲ್ಲಮೋ ಗೊತ್ತಿಲ್ಲ. ಮಹಜರು ಗೆ ಯಾರು ಉಕ್ತಲೇಖನ ಕೊಟ್ಟರು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಪೊಲೀಸರು ನನ್ನ ಎಷ್ಟು ಸಹಿಗಳನ್ನು ಪಡೆದುಕೊಂಡರು ಹೇಳಲಾಗುವುದಿಲ್ಲ. ಅಲ್ಲಿ ಸುತ್ತಮುತ್ತಲಿನ ಸುಮಾರು 20 ಜನ ಬಂದಿದ್ದರು. ಪೊಲೀಸರು ವಶಪಡಿಸಿಕೊಂಡ ವಸ್ತುಗಳನ್ನು ಸೀಲು ಮಾಡಿ ಅವುಗಳ ಮೇಲೆ ನನ್ನ ಸಹಿ ಪಡೆದುಕೊಂಡರು. ಎಷ್ಟು ವಸ್ತುಗಳ ಮೇಲೆ ನನ್ನ ಸಹಿ ಪಡೆದುಕೊಂಡರು ನನಗೆ ನೆನಪಿಲ್ಲ. ಸ್ಥಳದಲ್ಲಿ ಇದ್ದ ಬೇರೆ ಎಷ್ಟು ಜನ ಮಹಜರುಗೆ ಸಹಿ ಮಾಡಿದರು ನನಗೆ ಗೊತ್ತಿಲ್ಲ. ಸ್ಥಳ ಮಹಜರುನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಬರೆದ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

8. ಮರು ಹೇಳಿಕೆಯನ್ನು ದೂರು ಕೊಟ್ಟ 8 - 9 ತಿಂಗಳ ನಂತರ ಕೊಟ್ಟಿರುತ್ತೇನೆ. ಈ ಮಧ್ಯದಲ್ಲಿ ಪೊಲೀಸರು ನನ್ನನ್ನು ಬೇಟಿ ಮಾಡಿರಲಿಲ್ಲ ಮತ್ತು ನನ್ನನ್ನು ನೊಟೀಸ್ ನೀಡಿ ಕರೆಸಿರಲಿಲ್ಲ. ದಿಃ 14.09.2021 ರಲ್ಲಿ ಹಾಜರಾಗುವಂತೆ ಪೊಲೀಸರು ನನಗೆ ನೊಟೀಸ್ ಕೊಟ್ಟಿರಲಿಲ್ಲ. ಠಾಣೆಗೆ ಬರುವಂತೆ ಠಾಣಾಧಿಕಾರಿಗಳು ನನಗೆ ಯಾವತ್ತು ಹೇಳಿರಲಿಲ್ಲ. ಆರೋಪಿಗಳು ಠಾಣೆಯಲ್ಲಿದ್ದಾರೆ ಬಂದುನೋಡುವಂತೆ ಪೊಲೀಸರು ನನಗೆ ಹೇಳಿದ್ದರು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಪೊಲೀಸರೇ ಆರೋಪಿಗಳನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದರು. 4 ನೇ ಆರೋಪಿ ಮತ್ತು ಮೃತ ನವೀನ ನಡುವೆ ಅಕ್ರಮ ಸಂಬಂಧ ಇದ್ದ ವಿಚಾರ ಬೇರೆಯವರು ಹೇಳಿದಾಗ ನಮಗೆ ಗೊತ್ತಾಯಿತು. ನಾನು ಮತ್ತು ಪೊಲೀಸರು ಸೇರಿ 4 ನೇ ಆರೋಪಿಯನ್ನು ಈ ಕೇಸಿನಲ್ಲಿ ಅನಗತ್ಯವಾಗಿ ಸೇರಿಸಬೇಕು

*PW:1CW:1*

ಎಂದು ಈ ರೀತಿ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ದಿಃ 25.06.2021 ರಂದು ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ನೀಡಿಲ್ಲ ಅದನ್ನು ಪೊಲೀಸರೇ ತಯಾರು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳನ್ನು ಪೊಲೀಸರು ಈ ಕೇಸಿಗಾಗಿ ಬನಾವಟ್ಟು ಮಾಡಿದ್ದಾರೆ ಎಂದರೆ ಸರಿಯಲ್ಲ. ಮೃತ ನವೀನ ನನ್ನ ಸ್ನೇಹಿತನಾದ ಕಾರಣ ಪೊಲೀಸರ ಜೊತೆ ಸೇರಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಿರೋ ಇಗ್ ನೇಟರ್ ಕೆಎ – 40 - ಎಸ್ -7758 ದ್ವಿಚಕ್ರ ವಾಹನದಲ್ಲಿ ಹಿಂಬಾಲಿಸಿಕೊಂಡು ಹೋಗಿ ನವೀನ್ ನನ್ನು ಹಲ್ಲೆ ಮಾಡಿ , ಕೃತ್ಯ ಎಸಗಿದ್ದಾರೆ ಎಂದು ನಾನು ಪೊಲೀಸರಿಗೆ ಹೇಳಿರುವುದಿಲ್ಲ. 4 ನೇ ಆರೋಪಿ 1 ನೇ ಆರೋಪಿಯ ಮೂಲಕ 2 ಮತ್ತು 3 ನೇ ಆರೋಪಿಗಳಿಗೆ ನವೀನ್ ನನ್ನು ಕೊಲೆ ಮಾಡಿಸಲು ಕೊಲೆ ಮಾಡಲು ಪ್ರೇರೇಪಣೆ ನೀಡಿದ್ದಾರೆ ಎಂದು ನಾನು ಪೊಲೀಸರಿಗೆ ಹೇಳಿಲ್ಲ. 4 ನೇ ಆರೋಪಿಗೂ ಈ ಘಟನೆಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. 4 ನೇ ಆರೋಪಿಗೆ ತೊಂದರೆ ಆಗಬೇಕು ಎನ್ನುವ ಉದ್ದೇಶದಿಂದ ಪೊಲೀಸರು ಹಾಕಿದ ಸುಳ್ಳು ಕೇಸಿಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

*<u>ಮರುವಿಚಾರಣೆಃ ಇಲ್ಲ.</u>*

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 23.12.2021 ರಂದು ಬೆರಳಚ್ಚುಗಾರ್ತಿಯಿಂದ ಬೆರಳಚ್ಚು ಮಾಡಿಸಲಾಯಿತು.)*

*ಓದಿ ಹೇಳಿ ಕೇಳಿ ಸರಿ ಇದೆ*

**Sd/-**
*ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,*
*ಚಿಕ್ಕಬಳ್ಳಾಪುರ.*

*PW:1CW:1*